# ಶರಣ ಧರ್ಮ

ಹನ್ನೆರಡನೆಯ ಶತಮಾನ ಎಲ್ಲ ದೃಷ್ಟಿಕೋನಗಳಿಂದಲೂ ವಿಶಿಷ್ಟವಾದ ಯುಗ. ಶರಣರು ಸಮಾನತೆಯ, ಸರ್ವಸಮನ್ವತೆಯ ಹೊಸ ಸಮಾಜವೊಂದನ್ನು ಕಟ್ಟಲು ತಮ್ಮನ್ನು ತೊಡಗಿಸಿಕೊಂಡ ವಿಶೇಷ ಸಂದರ್ಭ ಅದು. ವರ್ಣ, ವರ್ಗ, ಲಿಂಗಭೇದದ ಸಮಾಜದಿಂದ ಹೊರಬಂದು ಶರಣರೆಲ್ಲಾ ಒಂದೇ ಕುಲ ಎಂದು ಘೋಷಿಸಿಕೊಂಡ ಚಾರಿತ್ರಿಕ ಕಾಲಘಟ್ಟ. ಒಂದೇ ಕುಲ, ಒಂದೇ ದೈವ, ಒಂದೇ ಅನುಭಾವದ ಭಾಷೆ ಎಂದು ಗುರುತಿಸಿಕೊಳ್ಳುವುದರ ಮೂಲಕ ಅವರೆಲ್ಲಾ ಒಟ್ಟಾಗಿ ನಿಂತರು. ಅನುಭವ ಮಂಟಪ ಅವರನ್ನೆಲ್ಲಾ ಒಂದುಗೂಡಿಸುವ ವೇದಿಕೆಯಾಗಿತ್ತು. ಶರಣರ ನುಡಿಗಡಣವೇ ಬದುಕೆಂಬ ಬಂಡಿಯನ್ನು ನಡೆಸುವ ಕಡೆಗೀಲು ಆಗಿತ್ತು. ಹೊಸಸಮಾಜವೊಂದನ್ನು ಸೃಷ್ಟಿಸಬೇಕೆಂಬ ಹುಮ್ಮಸ್ಸು ಶರಣ ಸಮೂಹದಲ್ಲಿ ಎದ್ದು ಕಾಣುತ್ತಿತ್ತು.

ದ್ರಾವಿಡ ಸಂಸ್ಕೃತಿಯಲ್ಲಿ ಕುಟುಂಬ ಹಾಗೂ ಸಮಾಜದಲ್ಲಿ ಉನ್ನತ ಸ್ಥಾನ ಪಡೆದಿದ್ದ ಹೆಣ್ಣನ್ನು ಆರ್ಯ ಸಂಸ್ಕೃತಿ ಕಾಲಿಟ್ಟ ಸಂದರ್ಭದಲ್ಲಿ ಕೆಳಗೆ ಇಳಿಸಲಾಯಿತು. ಪಿತೃಪ್ರಧಾನ ವ್ಯವಸ್ಥೆ ಕಾಲಿಟ್ಟ ನಂತರ ತನ್ನ ಮನೆಯಲ್ಲಿಯೇ ಅವಳು ಪರಾಧೀನಳಾದಳು. ಬಾಲ್ಯದಲ್ಲಿ, ಯೌವನದಲ್ಲಿ, ವೃದ್ಧಾಪ್ಯದಲ್ಲಿ ಅವಳು ತನ್ನ ಕುಟುಂಬದ ಪುರುಷ ಸದಸ್ಯರನ್ನು ಅವಲಂಬಿಸಿ ಬದುಕಬೇಕೆಂಬ ಮನುನಿರ್ಮಿತ ಕಟ್ಟುಪಾಡುಗಳಲ್ಲಿ ಬಂಧಿಯಾಗಬೇಕಾಯಿತು.

ದೈಹಿಕ ವ್ಯತ್ಯಾಸಗಳನ್ನೇ ಮುಂದುಮಾಡಿ ಅವಳನ್ನು ಅಬಲೆಯೆನ್ನಲಾಯಿತು. ನೈಸರ್ಗಿಕವಾದ ಋತುಚಕ್ರವನ್ನು ಮುಂದುಮಾಡಿ ಅವಳನ್ನು ಶೂದ್ರಳೆಂದು ಕರೆಯಲಾಯಿತು. ಹೆಣ್ಣನ್ನು ಪುರುಷನ ಸಾಧನೆಯ ಪಥವನ್ನು ದಿಕ್ಕೆಡಿಸುವ ಮಾಯೆಯೆಂದು ಕರೆಯಲಾಯಿತು. ಹೊನ್ನು, ಮಣ್ಣು, ಹೆಣ್ಣು ಎಂಬ ಮಾಯೆಗಳ ಪಟ್ಟಿಯಲ್ಲಿ ಅವಳು ಸೇರಿಹೋಗಿದ್ದಳು. ಪುರುಷನ ನೆರವಿಲ್ಲದೆ ಅವಳ ಮೋಕ್ಷ ಸಾಧ್ಯವಿಲ್ಲ ಎಂದು ಅವಳನ್ನು ಮೂಲೆಗೆ ತಳ್ಳಲಾಗಿತ್ತು.

ಜಾತಿ ಕಾರಣಕ್ಕೆ ಮೂಲೆಗೆ ತಳ್ಳಿದ ಶೂದ್ರರನ್ನು ಒಳಗೊಂಡಂತೆ ಹೆಣ್ಣೆಂದು ಎಲ್ಲಾ ವರ್ಗದ ಹೆಣ್ಣುಮಕ್ಕಳನ್ನು ಶೂದ್ರರೆಂದು ಕರೆಯುತ್ತಿದ್ದ ವ್ಯವಸ್ಥೆಯನ್ನು ಪ್ರಶ್ನಿಸಲಾಗುತ್ತದೆ. ಯಾವುದು ಹೊಲೆ, ಯಾವುದು ಸೂತಕ, ಯಾವುದು ಮಾಯೆ ಎಂಬ ಸಾಮೂಹಿಕ ಚರ್ಚೆಯ ಮೂಲಕ ಹಳೆಯ ವ್ಯವಸ್ಥೆಯನ್ನು ಮುರಿಯುವ ಕೆಲಸವನ್ನು ಶರಣರು ಮಾಡಿದರು. ಆತ್ಮಕ್ಕೆ ಹೆಣ್ಣುಗಂಡೆಂಬ ಭೇದವಿಲ್ಲ. ಹೆಣ್ಣನ್ನು ಮಾಯೆಯೆನ್ನುವುದು ಸರಿಯಲ್ಲ. ಮನದ ಮುಂದಣ ಆಸೆಯೇ ನಿಜವಾದ ಮಾಯೆ ಎಂದು ಸಾರಿದರು. ಪ್ರತಿ ಬಾರಿ ಮುಟ್ಟು ಹೊಸ ಸೃಷ್ಟಿಗೆ ಕಾರಣವಾಗುವ ಪವಿತ್ರ ಕ್ರಿಯೆ ಎಂದು ತಿಳಿಸಿ ಸೂತಕದ ಪಾತಕದಿಂದ ಬಿಡುಗಡೆಗೊಳಿಸುವ ಪ್ರಯತ್ನ ಮಾಡಿದರು. ಹೊಲೆಯುಂಟೆ ಲಿಂಗವಿದ್ದೆಡೆಯಲ್ಲಿ ಎಂದು ತಿಳಿಸಿ ಹೇಳಿದರು. ಮುಟ್ಟಾದ ಸ್ತ್ರೀ ಮಾಡಿದ ಅಡುಗೆ ಪವಿತ್ರ ಕಾರ್ಯದಲ್ಲಿ ಸಲ್ಲುವುದಿಲ್ಲ ಎಂಬ ನಂಬಿಕೆಗಳನ್ನು ಛಿದ್ರಗೊಳಿಸಿದರು. 'ಹೆಣ್ಣು ಹೆಣ್ಣಲ್ಲ, ಹೆಣ್ಣು ರಕ್ಕಸಿಯಲ್ಲ, ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ' ಎಂಬ ದೈವತ್ವಕ್ಕೆ ಅವಳನ್ನು ಏರಿಸಿದರು.

ಅಲ್ಲಮನು ಅಧ್ಯಕ್ಷನಾಗಿದ್ದ ಅನುಭವ ಮಂಟಪ ಶರಣರೆಲ್ಲ ಕುಳಿತು ಮಾತನಾಡುವ, ವಿಚಾರ ವಿನಿಮಯ ಮಾಡಿಕೊಳ್ಳುವ, ತಮ್ಮತಮ್ಮ ವಚನ ರಚನೆಗಳನ್ನು ಪ್ರಸ್ತುತಪಡಿಸುವ ವೇದಿಕೆಯಾಗಿತ್ತು. ಹೀಗಾಗಿಯೇ ಅನುಭವ ಮಂಟಪವನ್ನು ಮೊದಲ ಪಾರ್ಲಿಮೆಂಟ್ ಎಂದು ಗುರುತಿಸಲಾಯಿತು. ಮಾನವ ಕುಲದ ನಡೆನುಡಿಯನ್ನು, ಸೌಹಾರ್ದ ಬದುಕನ್ನು ನಿರ್ದೇಶಿಸುವ ವಚನಗಳನ್ನು '12ನೇ ಶತಮಾನದ ಸಂವಿಧಾನ' ಎಂದು ಕರೆಯಲಾಯಿತು.

ಶರಣರ ಸಮನಾಗಿ ಕುಳಿತುಕೊಳ್ಳುವ, ತಮ್ಮ ಅಭಿಪ್ರಾಯಗಳನ್ನು ವಚನ ರಚನೆಯ ಮೂಲಕ ಅಭಿವ್ಯಕ್ತಿಸುವ ಸ್ವಾತಂತ್ರ್ಯವನ್ನು ಶರಣೆಯರು ಪಡೆದಿದ್ದರು. ಉಳಿದೆಲ್ಲ ಕಾಲಘಟ್ಟಗಳಿಗಿಂತ ಹನ್ನೆರಡನೆಯ ಶತಮಾನದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಮಹಿಳೆಯರು ಬರೆದರು. ಹೀಗಾಗಿ ಮಹಿಳಾ ಸಾಹಿತ್ಯದ ಅತಿವೃಷ್ಟಿಯ ವಿಸ್ಮಯದ ಕಾಲಘಟ್ಟವಿದಾಗಿತ್ತು. ಅದರಲ್ಲಿಯೂ ವಿಶೇಷವಾಗಿ ಕೆಲವು ಶರಣ ದಂಪತಿಗಳು ಒಟ್ಟೊಟ್ಟಿಗೆ ಕಾಯಕ, ದಾಸೋಹಗಳನ್ನು ನಿರ್ವಹಿಸುತ್ತಲೇ 'ಶರಣ ಸತಿ ಲಿಂಗ ಪತಿ' ಎಂಬ ತತ್ವವನ್ನು ಅನುಷ್ಠಾನಗೊಳಿಸುತ್ತಾ ಬದುಕಿದರು.

ಈ ದಂಪತಿಗಳಲ್ಲಿ ಕಾಯಕನಿಷ್ಠೆಯನ್ನು ತಪಸ್ಸಿನಂತೆ ನಿರ್ವಹಿಸಿದ ಆಯ್ದಕ್ಕಿ ಲಕ್ಕಮ್ಮ ಹಾಗೂ ಮಾರಯ್ಯನವರ ಕತೆ ವಿಶಿಷ್ಟವಾದದ್ದು. ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕು ಅಮರೇಶ್ವರ ಗ್ರಾಮದ ಈ ದಂಪತಿಗಳು ಬಸವಣ್ಣನವರ ಹೆಸರನ್ನು ಕೇಳಿ ಕಲ್ಯಾಣಕ್ಕೆ ಬಂದು ನೆಲೆಸುತ್ತಾರೆ. ಬೀದಿಯಲ್ಲಿ ಬಿದ್ದ ಅಕ್ಕಿಯನ್ನ ಆಯ್ದು ತಂದು ಆ ಮೂಲಕ ಜಂಗಮ ದಾಸೋಹ ಮಾಡುವ ವೃತ್ತಿಯನ್ನು ಆರಿಸಿಕೊಳ್ಳುತ್ತಾರೆ. ಅಂದಂದಿಗೆ ಎಷ್ಟು ಬೇಕೋ ಅಷ್ಟನ್ನು ಇರಿಸಿಕೊಂಡು ಉಳಿದುದ್ದನ್ನು ಇಲ್ಲದವರಿಗೆ ನೀಡುವ 'ಸಂಗ್ರಹ ತತ್ವವನ್ನು' ಅವರು ಅನುಸರಿಸುತ್ತಿರುತ್ತಾರೆ.

ಒಮ್ಮೆ ಬಸವಣ್ಣ ಪರೀಕ್ಷಿಸಲೆಂದು ಹೆಚ್ಚಿನ ಅಕ್ಕಿಯನ್ನು ಬೀದಿಯಲ್ಲಿ ಚೆಲ್ಲಿಸುತ್ತಾನೆ. ಅದನ್ನು ಆರಿಸಿಕೊಂಡ ಮಾರಯ್ಯ ಸಂತೋಷದಿಂದ ಮನೆಗೆ ಬಂದು ಹೆಂಡತಿಯ ಕೈಗೆ ಕೊಡುತ್ತಾನೆ. ಅವನ ಹೆಂಡತಿ ಲಕ್ಕಮ್ಮ ಸಂತೋಷಪಡುವ ಬದಲು ಸಿಟ್ಟಿಗೇಳುತ್ತಾಳೆ. 'ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ? ಈಸಕ್ಕಿಯಾಸೆ ನಿಮಗೇಕೆ?' ಎಂದು ಮರಳಿ ಕಳಿಸುತ್ತಾಳೆ.

ಅಷ್ಟಕ್ಕೆ ಸುಮ್ಮನಾಗದ ಆಕೆ ತಮ್ಮನ್ನು ಪರೀಕ್ಷಿಸಲೆತ್ನಿಸಿದ ಬಸವಣ್ಣನಿಗೆ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮರನ್ನು ಕರೆದುಕೊಂಡು ತಮ್ಮ ಮನೆಗೆ ಪ್ರಸಾದಕ್ಕೆ ಬರಬೇಕೆಂದು ಹೇಳಿಕಳಿಸುತ್ತಾಳೆ. ಅವರೆಲ್ಲರೂ ಅಚ್ಚರಿ ಪಡುವಂತೆ ಪ್ರಸಾದ ಕಾರ್ಯವನ್ನು ಸಂತೃಪ್ತಿಯಾಗುವಂತೆ ನೆರವೇರಿಸಿ ಮೆಚ್ಚುಗೆ ಪಡೆಯುತ್ತಾಳೆ. ಅಲ್ಲಮಪ್ರಭು ಅವಳ ಕಾಯಕದ ಮಹಿಮೆಯನ್ನು ಕುರಿತು 'ಕಾಯಕದ ಮಹಿಮೆ ಅರಿವಾಯಿತು' ಎಂದು ಹೊಗಳಿದರೆ, ಬಸವಣ್ಣ 'ಮನೆ ನೋಡಾ ಬಡವರು, ಮನ ನೋಡಾ ಸಂಪನ್ನರು' ಎಂದು ಮೆಚ್ಚುಗೆ ಸೂಚಿಸುತ್ತಾನೆ. ಹೀಗೆ ಸ್ವಾಭಿಮಾನ, ಸ್ವತಂತ್ರ ಆಲೋಚನೆ, ಹೊಸ ಸಮಾಜದ ಹೊಸಮೌಲ್ಯಗಳನ್ನು ಎತ್ತಿಹಿಡಿದ ಈ ದಂಪತಿಗಳ ಕತೆ ಇಂದು 'ಅಪಾರ ಆಸ್ತಿಪಾಸ್ತಿಯನ್ನು' ಸಂಗ್ರಹಿಸುವುದನ್ನೇ ವೃತ್ತಿಯಾಗಿಸಿಕೊಂಡ ಧನದಾಹಿಗಳ ಮನಸ್ಥಿತಿಯನ್ನು ಪ್ರಶ್ನಿಸುತ್ತದೆ.

■ **ಅಮೃತಮತಿ**

## ಮಾತೇ ಮುತ್ತು

- ನನ್ನ ಬದುಕಿನ ಬಗೆಗೆ ಯಾರೂ ಬರೆಯಲಾರರು. ಏಕೆಂದರೆ ಅದು ಮಾನವರ ದೃಷ್ಟಿಗೆ ಗೋಚರವಾಗುವಂತೆ ಹೊರ ಮುಖವಾಗಿ ಸಾಗಿಲ್ಲ.

—ಕುವೆಂಪು

- ಮನುಷ್ಯ ಅಂದಮೇಲೆ ಮೊದಲು ಆತ್ಮಾಭಿಮಾನ ಹೊಂದಿರಬೇಕು. ಆತ್ಮಾಭಿಮಾನ ಇಲ್ಲದವನು ನಿಜಕ್ಕೂ ಮನುಷ್ಯನಾಗಿ ಬೆಳೆಯಲಾರ.

—ಶಿವರಾಮ ಕಾರಂತ

- ಜೀವನದಲ್ಲಿ ತತ್ವ ಮತ್ತು ಸಿದ್ಧಾಂತಗಳನ್ನು ಮರೆತಾಗ ಸೋಲು ಎದುರಾಗುತ್ತದೆ.

—ನೆಹರೂ

- ಹಿಂಸೆ ಎಂದಿಗೂ ನಮ್ಮ ಗುರಿಯನ್ನು ಸಾಧಿಸಲಾರದು.

—ಮಹಾತ್ಮ ಗಾಂಧೀಜಿ

- ಸಣ್ಣಪುಟ್ಟ ಉಪಕಾರಗಳೂ ಒಳ್ಳೆಯ ನಡವಳಿಕೆಯನ್ನು ಮೂಡಿಸುತ್ತವೆ.

—ಎಮರ್ಸನ್

- ಅಹಂಕಾರವಿಲ್ಲದ ಮನುಷ್ಯ ಯಾವ ಧರ್ಮಗ್ರಂಥವನ್ನೂ ಓದದೆ, ಯಾವ ಮಂದಿರವನ್ನೂ ಪ್ರವೇಶಿಸದೆ ಮೋಕ್ಷ ಪಡೆಯಬಹುದು.

—ಸ್ವಾಮಿ ವಿವೇಕಾನಂದ

- ನೀನು ಬೇರೆಯವರ ಯೋಗ್ಯತೆ ಅಳೆಯುತ್ತಿದ್ದಿಯಾದರೆ ನಿನಗೆ ಪ್ರೀತಿಸಲು ಸಮಯವೇ ಇರುವುದಿಲ್ಲ.

—ಮದರ್ ತೆರೇಸಾ